O.S.36/2013 DW-1

ದಿನಾಂಕಃ 16.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃವಾದಿ ಪರ ವಕೀಲರಿಂದಃ**

ನಿಡಿ-1 ರಲ್ಲಿರುವ ಸ್ವತ್ತನ್ನು ನನ್ನ ತಂದೆಯವರು ಕ್ರಯಕ್ಕೆ ತೆಗೆದುಕೊಳ್ಳುವ ಮುನ್ನ ಕೆಂಪಣ್ಣರವರ ದೊಡ್ಡಪ್ಪರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಕೆಂಪಣ್ಣರವರ ದೊಡ್ಡಪ್ಪರವರ ಹೆಸರು ನಾಗಣ್ಣ. ನನ್ನ ತಂದೆಯವರು ಕ್ರಯಕ್ಕೆ ತೆಗೆದುಕೊಳ್ಳುವ ಮುನ್ನ ನಾಗಣ್ಣರವರ ಹೆಸರಿನಲ್ಲಿ ಇರುವ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಕ್ರಯ ಪತ್ರವನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿದಿರುತ್ತಾರೆ.ನಿಡಿ-1 ರನ್ನು ನನ್ನ ತಂದೆಯವರು ಸಾಕ್ಷಿದಾರರು ಮತ್ತು ಬರಹಗಾರರೊಂದಿಗೆ ಸೇರಿ ಸೃಷ್ಟಿ ಮಾಡಿರುವ ದಾಖಲೆ ಎಂದರೆ ಸರಿಯಲ್ಲ. ನಿಡಿ-1 ರ ಸ್ವತ್ತಿನ ಮೇಲೆ ಯಾವುದೇ ರೆವೆನ್ಯೂ ದಾಖಲಾತಿಗಳು ನಮ್ಮಗಳ ಹೆಸರಿಗೆ ಬದಲಾವಣೆ ಆಗಿಲ್ಲ ಎಂದರೆ ಸರಿಯಲ್ಲ. ನಿಡಿ-1 ರ ಆದಾಯದ ಮೇರೆಗೆ ಬದಲಾವಣೆ ಆದರಂತಹ ಖಾತೆ ಮತ್ತು ಇತರೆ ಕಂದಾಯ ದಾಖಲಾತಿಗಳು ನನ್ನ ಬಳಿ ಇವೆ ಎಂದರೆ ಸರಿ. ನಿಡಿ-4 ರಲ್ಲಿ ಖಾತಾ ನಂ. 34/34 ಗೆ ಕಂದಾಯ ಪಾತಿಸಿದ್ದೇನೆ ಎಂದರೆ ಸರಿ. ನಿಡಿ-5 ಖಾತಾ ನಂ.34/39 ಗೆ ಕಂದಾಯ ಪಾವತಿಸಿದ್ದೇನೆ ಎಂದರೆ ಸರಿ. ಕಂದಾಯ ರಶೀದಿಗಳು ದಾವಾ ಸ್ವತ್ತಿಗೆ ಸಂಬಂಧಪಟ್ಟಿದ್ದು ಅಲ್ಲ ಎಂದರೆ ಸರಿಯಲ್ಲ. ನಿಡಿ-12 ರಲ್ಲಿ ನನ್ನ ತಂದೆಯವರು ಕ್ರಯಕ್ಕೆ ಕೊಂಡುಕೊಂಡ ಬಗ್ಗೆ ನಮೂದಾಗಿಲ್ಲ ಎಂದರೆ ಸರಿಯಲ್ಲ. ನಿಡಿ-12 ರಲ್ಲಿ ವಿಸ್ತೀರ್ಣ 50X25 ಎಂದು ನಮೂದಾಗಿದೆ ಎಂದರೆ ಸರಿ. ನಿಡಿ-1 ರಲ್ಲಿರುವ ವಿಸ್ತೀರ್ಣ 52X25 ಎಂದು ನಮೂದಾಗಿದೆ ಎಂದರೆ ಸರಿ. ನಿಡಿ-1 ಮತ್ತು ನಿಡಿ-12 ರಲ್ಲಿರುವ ವಿಸ್ತೀರ್ಣ ಹೊಂದಿಕೊಳ್ಳುತ್ತಿಲ್ಲ ಎಂದರೆ ಸರಿಯಲ್ಲ. ನಿಡಿ-13 ರಲ್ಲಿರುವ ಮುದ್ದಪ್ಪ ಬಿನ್ ನಿಂಗಪ್ಪ ನನ್ನ ತಂದೆ ಎಂದರೆ ಸರಿ. ಅದರಲ್ಲಿ ಅಸೆಸಿಮೆಂಟ್ 6 ಎಂದು ನಮುದಾಗಿದೆ ಎಂದರೆ ಸರಿ. ನನ್ನ ತಂದೆಯವರು ಮೃತಪಟ್ಟ ನಂತರ ಅವರ ಹೆಸರಿನಲ್ಲಿರುವ ನಿಡಿ-1 ಆಸ್ತಿಯನ್ನು ನಾನು ಹಾಗೂ ನನ್ನ ಸಹೋದರರು ಪಾಲು ಮಾಡಿಕೊಂಡಿದ್ದೇವೆ ಎಂದರೆ ಸರಿ. ನಿಡಿ-1 ರಿಂದ 14 ವರೆಗೆ ನಾವು ಸೃಷ್ಟಿಸಿದ್ದ ದಾಖಲೆಗಳು ಎಂದರೆ ಸರಿಯಲ್ಲ. ನಾನು ವಾದಿಗಳಿಗೆ ತೆಂದರೆಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.
ಸಹಿ/-
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಶಿರಾ.